REGD.NEWS PAPER RNI KARKAN/50347/1988
RNI.Reg.No. KA/BGW/1861/2024-2026
Licenced to post without Pre-payment
Registered Regn.No. PMG/BG/WPP-411/2024-2026
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ



ಕನ್ನಡ ಮಾಸ ಪತ್ರಿಕೆ

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009 ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ
ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ


ಸಂಪುಟ : 39 ಜನವರಿ 2026 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 01

## ಅಧ್ಯಕ್ಷರ ನುಡಿ

ನಾಡಿನ ಸಮಸ್ತ ಕುಲಭಾಂದವರಿಗೆ 2026ನೇ ವರುಷದ ಹಾರ್ದಿಕ ಶುಭಾಷಯಗಳು. ಹೊಸ ಕ್ಯಾಲೆಂಡರ್ ವರ್ಷ ನಮ್ಮ ಎಲ್ಲಾ ಓದುಗರಿಗೂ ಕುಟುಂಬ ವರ್ಗದವರಿಗೂ ಸರ್ವತೋಮುಖ ಅಭಿವೃದ್ಧಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ. **ಪ್ರತಿಯೊಂದು ದಿನವೂ ಮುಂದಿನ ಹೊಸ ವರುಷಗಳಿಗೆ ಹತ್ತಿರವಾಗುತ್ತದೆ. ಅಂತೆಯೇ ಪ್ರತಿಯೊಂದು ಕಳೆದು ಹೋದ ದಿನಗಳು ನಮ್ಮ ಜೀವನದ ಆಯುಷ್ಯವನ್ನು ಕಡಿಮೆ ಮಾಡುತ್ತಿದೆ ಎನ್ನುವುದು ಅಷ್ಟೇ ಸತ್ಯ ಅಲ್ಲವೇ?** ಆದರೆ, ಸಾಮಾನ್ಯವಾಗಿ ಪ್ರತಿಯೊಬ್ಬರು ಹೊಸತನದ ಬಗ್ಗೆ ಹೊಸ ಆಗಮನದ ಬಗ್ಗೆಯಷ್ಟೇ ಯೋಚಿಸುತ್ತಾ, ಸಂಭ್ರಮಿಸುತ್ತಾ ಜೀವನವನ್ನು ಕಳೆಯುತ್ತಾರೆ ಆದರೆ ಜೀವನದಲ್ಲಿ ಸಾಧಿಸಬೇಕು, ಜೀವನಕ್ಕೊಂದು ಅರ್ಥ ಕೊಡಬೇಕು, **ಇತಿಹಾಸದ ಪುಟಗಳಲ್ಲಿ ತಮ್ಮ ಸಾಧನೆಗಳು ದಾಖಲಾಗಬೇಕೆಂಬುವವರು ವಿಭಿನ್ನವಾಗಿ ಆಲೋಚಿಸಿ, ವಿಭಿನ್ನವಾಗಿ ಕಾರ್ಯನಿರ್ವಹಿಸುತ್ತಾ ಬದುಕಿಗೊಂದು ವಿಶೇಷ ಅರ್ಥ ಕೊಡುವ ಮೂಲಕ ಇತಿಹಾಸ ಸೃಷ್ಟಿಸುತ್ತಾರೆ ಅಲ್ಲವೇ...?** 2026ರಲ್ಲಿ ನಮ್ಮ ಬದಲಾವಣೆ ಹೇಗಿರಬೇಕು ಅಂದರೆ...

**ನಿನಗೆ ತಲೆ ಇಲ್ಲ ಎಂದವರಿಗೆ ತಲೆ ಸುತ್ತುವಂತೆ ನೀನು ಬೆಳೆಯಬೇಕು, ನಿನಗೆ ಧೈರ್ಯ ಇಲ್ಲ ಎಂದವರು ನಿನ್ನ ಸಾಧನೆ ನೋಡಿ ಭಯಪಡಬೇಕು, ನಿಮ್ಮನ್ನು ಅಸಡ್ಡೆ ಮಾಡಿದವರಿಗೆ, ನೀವು ಅನಿವಾರ್ಯ ಆಗಬೇಕು., ನೆನಪಿರಲಿ ಸವಾಲುಗಳನ್ನು ಮೀರಿ ನಡೆದಾಗಲೇ ಬದುಕು... ಮತ್ತು ಬದುಕಿದ್ದು ಸಾರ್ಥಕ.** ಸಾಧನೆ ಮಾಡಲು ಹಣ ಮುಖ್ಯ ಅಲ್ಲ. ಸ್ಪಷ್ಟವಾದ ಗುರಿ, ನಿಮ್ಮ ಮೇಲೆ ನಿಮಗೆ ಅಚಲ ವಿಶ್ವಾಸ ಇದ್ದಲ್ಲಿ ಮಾತ್ರ ಹೊಸ ಕನಸುಗಳು, ಕನಸು ನನಸು ಮಾಡಲು ನಿರಂತರ ಪ್ರಯತ್ನ, ಎಡಬಿಡದ ಛಲ, ಶಿಲೆ ಶಿಲ್ಪವಾದಂತೆ, ವ್ಯಕ್ತಿ ಅಸಾಮಾನ್ಯನಾಗಿ ದೇಶಕ್ಕೆ ಆದರ್ಶಕನಾಗುತ್ತಾನೆ. ನದಿಗಳು ಸಮುದ್ರಗಳಾಗಲೂ ಸಾಧ್ಯವಿಲ್ಲ ಆದರೆ ನದಿ ಹರಿದು ಹರಿದು ಸಮುದ್ರ ಸೇರಿದ ಮೇಲೆ ತನ್ನ ವಿಸ್ತಾರವನ್ನು – ಹಿರಿಮೆಯನ್ನು ಹೆಚ್ಚಿಸಿ ಕೊಳ್ಳುವಂತೆ ನಾವೂ ಸಹ ಜೀವನದುದ್ದಕ್ಕೂ ಉತ್ತಮ ಕಾರ್ಯಗಳ ಮೂಲಕ ಆಯಾ ಕಾಲಕ್ಕೆ ತಕ್ಕಂತೆ ಅವಶ್ಯವಿರುವವರಿಗೆ ಆಸರೆಯಾಗಿ, ಆಶ್ರಯವಾಗಿ ಸಾಧನೆಯ ಸಾಗರವನ್ನು ಸೇರಿ ಸಾಧಕರಲ್ಲಿ ವಿಶೇಷರಾಗೋಣ ಎಂಬ ಆಶಯ ಮನೆ–ಮನೆಗಳಲ್ಲಿ, ಮನಸು–ಮನಸ್ಸುಗಳಲ್ಲಿ ಉದಯಿಸಿ, ಹೃದಯ ಹೃದಯಗಳಲ್ಲಿ ಅರಳಿ ರಾಷ್ಟ್ರ ಪ್ರಗತಿಯ ಸಮಾಜ ನಿರ್ಮಾಣವಾಗಲೆಂದು ಆಶಿಸುತ್ತೇನೆ.


**ದೇಹ ದುಡಿದರೆ ಕಾರ್ಮಿಕ, ಬುದ್ದಿ ದುಡಿದರೆ ಮಾಲೀಕ** ಎಂಬ ಚಿಂತನೆಗಳಿಂದ ಶತಶತಮಾನಗಳಿಂದಲೂ ವ್ಯಾಪಾರ, ವಾಣಿಜ್ಯೋಧ್ಯಮಗಳಲ್ಲಿ ತೊಡಗಿಸಿಕೊಂಡು ತಾವೂ ಬೆಳೆದು, ತಮ್ಮವರನ್ನು ಬೆಳೆಸಿ, ದೇಶದ ಆರ್ಥಿಕ ಶಕ್ತಿಯಾಗಿಬೆಳೆದಿದ್ದ ನಮ್ಮ ಸಮಾಜ ಏಕೋ... ಏನೋ... ಇತ್ತೀಚಿನ ವರ್ಷಗಳಲ್ಲಿ ನಮ್ಮ ಯುವ ಪೀಳಿಗೆ ವ್ಯಾಪಾರೋದ್ಯೊಮಗಳ ಕಡೆ ಅನಾಸಕ್ತಿ ತೋರುತ್ತಾ ವಿದ್ಯೆ ಕಲಿತು, ಜೀವನೋಪಾಯಕ್ಕಾಗಿ ಉದ್ಯೋಗಗಳನ್ನು ಅರಸಿ ಊರುಗಳನ್ನು/ದೇಶಗಳನ್ನು ಬಿಟ್ಟು ಹೋಗುತ್ತಿರುವುದು ಶುಭ ಸೂಚಕವಲ್ಲ. ಅತೀ ಕಡಿಮೆ ಶಿಕ್ಷಣ ಪಡೆದಿದ್ದ ನಮ್ಮ ಹಿರಿಯರು ವ್ಯಾಪಾರ ವ್ಯವಹಾರಗಳ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸದೃಢರಾಗಿ ಉದ್ಯೋಗ ದಾತರಾಗಿದ್ದರು ಎಂಬುದನ್ನು ಮರೆಯುವಂತಿಲ್ಲ. ಆದರೆ ಇಂದು **ಬೆಟ್ಟದಷ್ಟು ಕಲಿತರು ಉದ್ಯೋಗಕ್ಕಾಗಿ ಕೈಚಾಚುತ್ತಿರುವುದು ಎಷ್ಟು ಮಾತ್ರ ಸರಿ?** ಯುವ ಜನರೇ, ನಿಮಗೊಂದು ಕಿವಿಮಾತು **"ನೌಕರಿ ಮಾಡಿ ಮನುಷ್ಯ ಮನೆ ಕಟ್ಟಬಹುದು, ಆದರೆ ಸಾಮ್ರಾಜ್ಯ ಕಟ್ಟಬೇಕೆಂದರೆ ವ್ಯಾಪಾರೋದ್ಯಮಕ್ಕೇ... ಬರಬೇಕು".** ಹಿಂದೆ ನಾವು ಏನು ಕಳೆದುಕೊಂಡಿದ್ದೆವೆಂದು ನೋಡಬೇಡಿ, ಇನ್ನೂ ಏನನ್ನು ಗಳಿಸಬಹುದೆಂದು ಯೋಚಿಸಿ. ಇಂದಿನ ಜಾಗತಿಕ ಪ್ರಪಂಚದಲ್ಲಿ ದುಡಿಮೆ ಮಾಡಲು ಸಾವಿರ ದಾರಿಗಳಿವೆ, ಸಾವಿರ–ಸಾವಿರ ವ್ಯಾಪಾರ ಸಾಧ್ಯತೆಗಳಿವೆ. ನಗರಗಳಲ್ಲಿ/ದೊಡ್ಡ ದೊಡ್ಡ ಪಟ್ಟಣಗಳಲ್ಲಿದ್ದೇ ವ್ಯಾಪಾರ ಮಾಡಬೇಕೆಂಬ ವ್ಯವಸ್ಥೆ ಈಗ ಇಲ್ಲ, ನಿಮ್ಮ ತಲೆಯಲ್ಲಿರುವ ಬುದ್ದಿವಂತಿಕೆ, ನಿಮ್ಮ ಕೈಯಲ್ಲಿರುವ ಸ್ಮಾರ್ಟ್ ಫೋನ್, ನೀವು ವಿಶ್ವದ ಯಾವುದೇ ಭಾಗದಲ್ಲಿದ್ದರೂ, ವಿಶ್ವದೆಲ್ಲೆಡೆ ವ್ಯಾಪಾರ ಮಾಡುವ ವಿಫುಲವಾದ ಅವಕಾಶಗಳು ತಮ್ಮ ಮುಂದೆ ಹರಿದಾಡುತ್ತಿವೆ. ಗಮನವಿಟ್ಟು ಓದಿ **ಬಡವ ಮತ್ತು ಶ್ರೀಮಂತ ನಡುವಿನ ವ್ಯತ್ಯಾಸ ಆಲೋಚನೆಯಲ್ಲಿದೆಯೇ ಹೊರತು ಹಣದಲ್ಲಿಲ್ಲ ನಿಮ್ಮ ಕಿಸೆಯಲ್ಲಿ ಹಣವಿಲ್ಲದಿದ್ದರೂ ಪರವಾಗಿಲ್ಲ, ಆದರೆ ಮನಸಿನಲ್ಲಿ ಕೋಟಿಗಟ್ಟಲೆ ಸಂಪಾದಿಸುವ ಕನಸುಗಳಿರಬೇಕು ಅಷ್ಟೇ.**



ನಿಮ್ಮ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು, ಆಸಕ್ತಿ ಇರುವ ಮನಸುಗಳಲ್ಲಿ ಕನಸುಗಳನ್ನು ಬಿತ್ತಲು, ನವ ಯುವ ಶಕ್ತಿಯನ್ನು ಉದ್ಯೋಗಕ್ಕೆ ಮೊಟಕುಗೊಳಿಸದೆ ಉದ್ಯೋಗ ರತ್ನಗಳನ್ನಾಗಿ ಪರಿವರ್ತಿಸಲು ಪ್ರಸ್ತುತ ಇರುವ ವ್ಯಾಪಾರಗಳನ್ನು ಉನ್ನತ ದರ್ಜೆಗೆ ಬೆಳೆಸಲು, ಹೊಸ ಹೊಸ ಉದ್ಯಮಗಳ ಬಗ್ಗೆ ತಿಳಿದು, ಬೆಳೆಯಲು ಅವಶ್ಯವಿರುವ ಸಲಹೆ, ಸಹಾಯ ಮಾರ್ಗದರ್ಶನ ನೀಡುವಂತಹ ವಿಶೇಷ ಕಾರ್ಯಕ್ರಮ ವಿಶ್ವ ಆರ್ಯವೈಶ್ಯ ಸಮಾವೇಶ. ಈ ಸಮಾವೇಶದ ಉದ್ದೇಶಗಳು ಅನನ್ಯ, ವಿಶ್ವದಾದ್ಯಂತ ಇರುವ ವಿವಿಧ ಕ್ಷೇತ್ರಗಳ ಸಾಧಕರನ್ನು ಒಂದೆಡೆ ಸೇರಿಸಿ ತನ್ಮೂಲಕ ನವ ಪೀಳಿಗೆಗೆ ಮಾರ್ಗದರ್ಶನ ನೀಡಿ ಅವರ ಕನಸುಗಳಿಗೆ ಜೀವತುಂಬಿ, ಮನಸ್ಸುಗಳಿಗೆ ಶಕ್ತಿತುಂಬಿ, ಹೃದಯದಲ್ಲಿ ಧೈರ್ಯತುಂಬಿ ನಿರಂತರ ಪರಿಶ್ರಮದಿಂದ ಸಾಧನೆಗಳ ಮೆಟ್ಟಿಲೇರಿ ಜಾಗತಿಕ ಮಟ್ಟದಲ್ಲಿ ಧ್ರುವತಾರೆಗಳಾಗಿ ಬೆಳಗುವಂತಹ ಯುವ ಶಕ್ತಿಯನ್ನು ಕಟ್ಟಿ ಬೆಳೆಸುವ ರಾಷ್ಟ್ರದ ಆರ್ಥಿಕ ಶಕ್ತಿಯಾಗಿ ದೇಶ ನಿರ್ಮಾಣ ಮಾಡುವ ಕಟ್ಟಾಳುಗಳ ನಿರ್ಮಾಣವೇ ವಿಶ್ವ ಆರ್ಯವೈಶ್ಯ ಸಮಾವೇಶದ ಮಹತ್ತರ ಗುರಿ.

ನಮ್ಮ ಸಮಾಜದ ಭೂತಕಾಲದ ವರ್ತಮಾನ ಕಾಲದ ಪ್ರತಿಷ್ಠಿತ ವ್ಯಕ್ತಿಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸಿ **ತಾಳ್ಮೆ ಮತ್ತು ಕಠಿಣ ಪರಿಶ್ರಮಗಳ ನಿಷ್ಠೆ ಇದ್ದಲ್ಲಿ ಸಾಧನೆ ಮಾಡಲು ಸರ್ವರಿಗೂ ಸಾಧ್ಯವಿದೆ** ಎಂಬುದನ್ನು ಪರಿಚಯಿಸುವ ಅಪೂರ್ವ ವೇದಿಕೆ. ವಿಶ್ವ ಆರ್ಯವೈಶ್ಯ ಸಮಾವೇಶ **2026ರ ಡಿಸೆಂಬರ್ 24 ರಿಂದ 27ರ ವರೆವಿಗೂ ಬೆಂಗಳೂರಿನ ಅರಮನೆ ಮೈದಾನದಲ್ಲಿ** ನಡೆಯಲಿದ್ದು, ಸುಮಾರು ಒಂದೂವರೆ ಲಕ್ಷ ಬಂಧುಗಳು ವಿಶ್ವದ ನಾನಾ ಭಾಗಗಳಿಂದ ಕಾರ್ಯಕ್ರಮಕ್ಕೆ ಆಗಮಿಸುವ ನಿರೀಕ್ಷೆಯಿದೆ. ಅಮೆರಿಕಾ ದೇಶದ ಅನಿವಾಸಿ ಭಾರತೀಯ ವಾಸವಿ ಸಂಘವನ್ನು ಒಳಗೊಂಡಂತೆ, ಕೆನೆಡಾ, ಆಸ್ಟ್ರೇಲಿಯಾ, ಸಿಂಗಾಪುರ, ದುಬೈ, ಯೂರೋಪ್ ಖಂಡ, ಇಂಗ್ಲೇಂಡ್ ಹಾಗೂ ಯು ಎ ಇ ದೇಶದಲ್ಲಿ ನೆಲೆಸಿರುವ ಆರ್ಯವೈಶ್ಯ ಬಂಧುಗಳ ಸಂಘಟನೆಗಳು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಲು ಆಸಕ್ತಿಯನ್ನು ತೋರಿರುವುದು ಶುಭ ಸಂಕೇತವಾಗಿದೆ. ಅಂತೆಯೇ ಆಂಧ್ರ, ತೆಲಂಗಾಣ, ತಮಿಳುನಾಡು, ಕೇರಳ, ಒರಿಸ್ಸಾ, ಪಾಂಡೀಚೆರಿ ಮತ್ತು ಮಹಾರಾಷ್ಟ್ರ ರಾಜ್ಯಗಳ ಮಹಾಸಭೆ ಪದಾಧಿಕಾರಿಗಳು ಸಹ ತಮ್ಮ ತಮ್ಮ ರಾಜ್ಯಗಳಿಂದ ಸಂಪೂರ್ಣ ಸಹಕಾರ ಕೊಡುವುದಾಗಿ ಘೋಷಿಸಿರುತ್ತಾರೆ.

**ಪ್ರೀತಿಯ ಯುವ ಮಿತ್ರರೇ, ಜೀವನದಲ್ಲಿ ನಿಮಗೆ ಯಾವುದು Challenge ಮಾಡುತ್ತದೋ ಅದು ನಿಮ್ಮನ್ನು Change ಕೂಡ ಮಾಡುತ್ತದೆ ನೆನಪಿರಲಿ. ನಿಮ್ಮ ಭವ್ಯ ಭವಿಷ್ಯಕ್ಕೆ ವಿಶ್ವದ ಅತ್ಯುತ್ತಮ ರಹದಾರಿ ವಿಶ್ವ ಆರ್ಯವೈಶ್ಯ ಸಮಾವೇಶ.** ರಾಜ್ಯದ ಪ್ರತಿಯೊಂದು ಆರ್ಯವೈಶ್ಯ ಮನೆಗಳಿಂದಲೂ ಕನಿಷ್ಟ ಒಬ್ಬರು ಸಮಾವೇಶದಲ್ಲಿ ಭಾಗವಹಿಸಲು ಮರೆಯದಿರಿ. ವಿಶ್ವ ಆರ್ಯವೈಶ್ಯ ಸಮಾವೇಶ ನಮಗಾಗಿ ನಮ್ಮ ಸಮಾಜದ ಸರ್ವಾಂಗೀಣ ಅಭಿವೃದ್ಧಿಗಾಗಿ, ನಮ್ಮ ಮುಂದಿನ ಪೀಳಿಗೆಯ ಭವ್ಯ ಭವಿಷ್ಯಕ್ಕಾಗಿ, ನಿಮ್ಮ ಸಲಹೆ, ಅನಿಸಿಕೆಗಳಿಗೆ ಮುಕ್ತ ಅವಕಾಶವಿದೆ.




**ನಾಡಿನ ಸಮಸ್ತ ಜನತೆಗೆ**
**ಮಕರ ಸಂಕ್ರಾಂತಿ ಹಬ್ಬದ**
**ಹಾರ್ದಿಕ ಶುಭಾಶಯಗಳು**



ಆರ್ ಪಿ ರವಿಶಂಕರ್
ಅಧ್ಯಕ್ಷರು

# ಅಭಿನಂದನೆಗಳು


ಎನ್. ಚಂದ್ರಬಾಬು ನಾಯ್ಡು
ಆಂಧ್ರಪ್ರದೇಶದ ಮುಖ್ಯಮಂತ್ರಿ


ಶ್ರೀ ಟಿ. ಜಿ. ಭರತ್
ಆಂಧ್ರಪ್ರದೇಶದ ಆಹಾರ ಸಂಸ್ಕರಣಾ ಸಚಿವರು



ಭೂಮಿಯಲ್ಲಿ ದುಷ್ಟಶಕ್ತಿಯ ಉಪಟಳ ಹೆಚ್ಚಾದ ಸಂದರ್ಭಗಳಲ್ಲೆಲ್ಲ ಭಗವಂತನು ಭೂಮಿಯಲ್ಲಿ ಅವತರಿಸಿ ದುಷ್ಟ ಸಂಹಾರವನ್ನು ಮಾಡಿ ಶಿಷ್ಟ ರಕ್ಷಣೆಯನ್ನು ಮಾಡಿರುವಂತಹ ಹತ್ತು ಹಲವು ಉಲ್ಲೇಖಗಳನ್ನು ನಾವು ಪುರಾಣದಲ್ಲಿ ಓದಿ ತಿಳಿದಿರುತ್ತೇವೆ. ಅಂತಹುದೇ ಸಂದರ್ಭದಲ್ಲಿ ಆದಿಶಕ್ತಿ ಪಾರ್ವತಿ ದೇವಿಯು ಭುವಿಯಲ್ಲಿ ವಾಸವಿಯಾಗಿ ಜನಿಸಿ ದುಷ್ಟ ಸಂಹಾರವನ್ನು ಮಾಡಿ, ವಿಶ್ವರೂಪ ದರ್ಶನ ನೀಡುವ ಮೂಲಕ ಮನುಕುಲಕ್ಕೆ ಶಾಂತಿ ಸಂದೇಶವನ್ನು ನೀಡಿದ ಕರುಣಾಮಯಿ ಶ್ರೀ ವಾಸವಿ ಕನ್ಯಕಾಪರಮೇಶ್ವರಿಯು ಜನಿಸಿದ ಹಾಗೂ ವಿಶ್ವರೂಪ ದರ್ಶನ ನೀಡಿರುವ ಪುಣ್ಯ ಕ್ಷೇತ್ರ ಪೆನಗೊಂಡೆ. ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿರುವ ನಮ್ಮ ಕುಲಮಾತೆಯ ಜನ್ಮ ಸ್ಥಳವನ್ನು **"ವಾಸವಿ ಪೆನಗೊಂಡೆ"** ಎಂದು ಸನ್ಮಾನ್ಯ ಶ್ರೀ ಚಂದ್ರಬಾಬು ನಾಯ್ಡು ನೇತೃತ್ವದ ಘನ ಆಂಧ್ರಪ್ರದೇಶ ಸರ್ಕಾರವು ನಾಮಕರಣ ಮಾಡಿ ಆದೇಶ ಹೊರಡಿಸಿದೆ. ದಶಕಗಳಿಂದ ಈ ಕಾರ್ಯಕ್ಕಾಗಿ ಹಾತೊರೆಯುತ್ತಿದ್ದ ಜಗತ್ತಿನ ಆರ್ಯವೈಶ್ಯ ಕುಲಬಾಂಧವರಿಗೆ ಅತೀವಸಂತಸ ಉಂಟಾಗಿದೆ. ಈ ಹೆಸರು ಬದಲಾವಣೆಯ ಕಾರ್ಯಕ್ಕೆ ಮುನ್ನುಡಿ ಬರೆದಿದ್ದ ಅಖಿಲಭಾರತ ಶ್ರೀ ವಾಸವಿ ಪೆನಗೊಂಡ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಡಾ|| ಪಿ ಎನ್ ಗೋವಿಂದರಾಜುಲು ಮತ್ತು ಅವರ ತಂಡಕ್ಕೆ ಹಾಗೂ ಸಮಾಜದ ಮನವಿಯನ್ನು ತಮ್ಮ ನಿರಂತರ ಪ್ರಯತ್ನಗಳ ಮೂಲಕ ಆರ್ಯವೈಶ್ಯ ಬಂಧುಗಳ ದಶಕಗಳ ಕನಸನ್ನು ಈಡೇರಿಸಿದ ಯುವ ಉದ್ಯಮಿ, ಯುವ ನೇತಾರ, ಆಂಧ್ರಪ್ರದೇಶ ಸರ್ಕಾರದ ಕೈಗಾರಿಕಾ ಸಚಿವರು ಆಗಿರುವ ಶ್ರೀ ಟಿ ಜಿ ಭರತ್‌ರವರ ಪರಿಶ್ರಮವನ್ನು ವಿಶ್ವದ ಸಮಸ್ತ ಆರ್ಯವೈಶ್ಯ ಬಂಧುಗಳ ಪರವಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಮತ್ತು ಅಖಿಲ ಭಾರತ ಆರ್ಯವೈಶ್ಯ ಮಹಾಸಭೆಗಳ ಮಹಾಮಂಡಳ ಅಭಿನಂದಿಸುತ್ತದೆ.


ಡಾ. ಪಿ ಎನ್ ಗೋವಿಂದರಾಜುಲು


ದಾವಣಗೆರೆಯ ಶ್ರೀ ಕನ್ನಿಕಾ ಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ ಹಾಗೂ ಕರ್ನಾಟಕ ಆರ್ಯವೈಶ್ಯ ಕೋ-ಆಪರೇಟಿವ್ ಬ್ಯಾಂಕ್ ಮತ್ತು ಸೊಸೈಟಿಗಳ ಮಹಾಮಂಡಳದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಆರ್ ಜಿ ಶ್ರೀನಿವಾಸ ಮೂರ್ತಿರವರು **ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಗಳ ನಿಗಮ**ಕ್ಕೆ, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯ ಪ್ರತಿನಿಧಿಗಳಾಗಿ ಮಹಾಮಂಡಳದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಸಹಕಾರ ಕ್ಷೇತ್ರಕ್ಕೆ ಇವರ ಮೂಲಕ ಮತ್ತಷ್ಟು ಉನ್ನತ ಸೇವೆ ಲಭಿಸಲೆಂದು ಆಶಿಸಿ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಅಭಿನಂದಿಸುತ್ತದೆ.


ಶ್ರೀ ಆರ್ ಜಿ ಶ್ರೀನಿವಾಸ ಮೂರ್ತಿ
ದಾವಣಗೆರೆ


ಕುಮಾರಿ ಪರಿಣಿತ ಬಿ

ಬೆಂಗಳೂರು ನಗರದ ಪ್ರತಿಷ್ಠಿತ ದಂತವೈದ್ಯೆ, ಲೇಖಕಿ, ಅಂಕಣಕಾರ್ತಿ, ಡಾ|| ಅನುಷಾ ಆರ್ ಗುಪ್ತ ಮತ್ತು ಬೆಸ್ಕಾಂನಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಕೆ ಬಾಲಾಜಿರವರ ಸುಪುತ್ರಿ ಕುಮಾರಿ ಪರಿಣಿತ ಬಿ ತನ್ನ 9ನೇ ವಯಸ್ಸಿನಲ್ಲಿ ಬರೆದಿರುವ **"ಟೇಲ್ಸ್ ಬೈ ಪರಿ"** ಎಂಬ ಕಥಾ ಸಂಕಲನ ಮಕ್ಕಳ ಮನಸ್ಸನ್ನು ಗೆದ್ದು ಪ್ರಸ್ತುತ ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರಿದೆ. ತನ್ನ 9ನೇ ವಯಸ್ಸಿನಲ್ಲೇ ಕುಮಾರಿ ಪರಿಣಿತ ಮಾಡಿರುವ ಅಪೂರ್ವ ಸಾಧನೆಯನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಅಭಿನಂದಿಸುತ್ತೆ. ಕಿರಿಯ ಲೇಖಕಿ, ಯುವ ಲೇಖಕಿಯಾಗಿ ದೇಶದ ಸಾಂಸ್ಕೃತಿಕ ಲೋಕದ ಪ್ರತಿಷ್ಠಿತ ವ್ಯಕ್ತಿಯಾಗಲೆಂದು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಶುಭ ಹಾರೈಸಿಸುತ್ತೆ.

## ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾದ ಸ್ವರ್ಣ ಮಹೋತ್ಸವ ಆಚರಣೆ




ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾದ ಸುವರ್ಣ ಮಹೋತ್ಸವ ಕಾರ್ಯಕ್ರಮವು ದಿನಾಂಕ : 28-12-2025ರ ಭಾನುವಾರ ದಾವಣಗೆರೆಯ ನಿಜಲಿಂಗಪ್ಪ ಬಡಾವಣೆ, ಕುಂದುವಾಡ ಕೆರೆ ರಸ್ತೆಯ ಬಂಟರ ಭವನದಲ್ಲಿ, ದಾವಣಗೆರೆ ಎಸ್.ಕೆ.ಪಿ. ರಸ್ತೆಯ ವಾಸವಿ ಯುವಜನ ಸಂಘದ ಆತಿಥ್ಯದಲ್ಲಿ ನಡೆಯಿತು.

1975 ರಲ್ಲಿ ಸೇವೆಯನ್ನು ಪ್ರಾರಂಭಿಸಿದ ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆಯು ಪ್ರಸಕ್ತ ವರ್ಷಕ್ಕೆ ಅಂದರೆ 2025ಕ್ಕೆ ಯಶಸ್ವಿ 50 ವರ್ಷ ಪೂರೈಸಿ ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿದ್ದು, 50 ವರ್ಷಗಳಲ್ಲಿ ಯುವಜನ ಮಹಾಸಭೆಯಲ್ಲಿ ಸೇವೆ ಸಲ್ಲಿಸಿದ ಎಲ್ಲಾ ರಾಜ್ಯಾಧ್ಯಕ್ಷರನ್ನು ಒಂದೆಡೆ ಸೇರಿಸಿ ಅವರ ಅವಧಿಯಲ್ಲಿ ನಡೆದ ಸೇವಾ ಕಾರ್ಯಕ್ರಮಗಳನ್ನು ಸ್ಮರಿಸಿ ಗೌರವಾರ್ಪಣೆಯನ್ನು ಸಲ್ಲಿಸಲಾಯಿತು.

ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾದ ರಾಜ್ಯಾಧ್ಯಕ್ಷರಾದ ಶ್ರೀ ಎಸ್.ಸುನಿಲ್ ಅವರು 2023-25ರ ಅವಧಿಯನ್ನು ಯುವ ಸಂಕಲ್ಪ ವರ್ಷ ಎಂದು ನಾಮಕಾರಣ ಮಾಡಿ ಆರ್ಯವೈಶ್ಯ ಯುವಕರಲ್ಲಿ ಸಮಾಜಮುಖಿ ಕೆಲಸದಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಸಿಕೊಳ್ಳಲು ಉತ್ತೇಜಿಸಿದರು ಹಾಗೂ ಯುವಕರು ನಾಯಕತ್ವ ಗುಣ ಬೆಳೆಸಿಕೊಳ್ಳುವಂತ ಅನೇಕ ಕಾರ್ಯಾಗಾರಗಳನ್ನು ಕಾರ್ಯಕ್ರಮದ ಮೂಲಕ ರೂಪಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭಾದ ರಾಜ್ಯಾಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್ ಉದ್ಘಾಟಕರಾಗಿ ಭಾಗವಹಿಸಿ, 2026ರಲ್ಲಿ ನಡೆಯುವ ವಿಶ್ವ ಆರ್ಯವೈಶ್ಯ ಸಮಾವೇಶ ಸಮ್ಮೇಳನದ ವಿವರಣೆಗಳನ್ನು ನೀಡಿ ವಿಶ್ವಾದ್ಯಂತ ಆರ್ಯವೈಶ್ಯ ಬಂಧುಗಳು ಭಾಗವಹಿಸುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲಾ ಆರ್ಯವೈಶ್ಯ ಬಂಧುಗಳು ಒಂದೆಡೆ ಸೇರುವ ಮೂಲಕ ಸಮಾಜದ ಬಲ ಪ್ರದರ್ಶಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದರು. ಕರ್ನಾಟಕ ಆರ್ಯವೈಶ್ಯ ನಿಗಮದ ಅಧ್ಯಕ್ಷರಾದ ಶ್ರೀ ಕೆ ವಿ ರಾಮ್‌ಪ್ರಸಾದ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸರ್ಕಾರದ ಯೋಜನೆಗಳನ್ನು ಅರ್ಯವೈಶ್ಯ ಬಂಧುಗಳು ಸಮಗ್ರವಾಗಿ ಬಳಸಿಕೊಳ್ಳುವಂತೆ ಮನವಿ ಮಾಡಿದರು. ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾ ನಿಕಟಪೂರ್ವ ಅಧ್ಯಕ್ಷರು ಶ್ರೀ ಜಿ ಬಿ ನಾಗೇಶ್, ಮಾಜಿ ಅಧ್ಯಕ್ಷರು ಶ್ರೀ ಎಸ್ ಟಿ ವಿಜೇಂದ್ರ, ಕರ್ನಾಟಕ ರಾಜ್ಯ ವಾಸವಿ ದೇವಾಲಯಗಳ ಒಕ್ಕೂಟದ ಅಧ್ಯಕ್ಷರು ಶ್ರೀ ಆರ್ ಎಲ್ ಪ್ರಭಾಕರ್, ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ ಅಧ್ಯಕ್ಷರು ಶ್ರೀಮತಿ ಉಮಾ ಸಾಯಿ ರಾಮ್, ದಾವಣಗೆರೆ ಎಸ್ ಕೆ ಪಿ ರಸ್ತೆ ವಾಸವಿ ಯುವಜನ ಸಂಘದ ಗೌರವಾಧ್ಯಕ್ಷರು ಶ್ರೀ ಎನ್ ವಿ ಬದ್ರಿನಾಥ್, ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭದ ಪ್ರಧಾನ ಕಾರ್ಯದರ್ಶಿ ಶ್ರೀ ಜಿ ವಿ ಭೀಮರಾಜು, ಕೋಶಾಧ್ಯಕ್ಷರು ಶ್ರೀ ಕೆ ಆರ್ ಎನ್ ಚರಣ್ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ವರದಿ: ಎಸ್ ಸುನಿಲ್ ಅಧ್ಯಕ್ಷರು ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾ

## ಯುಗಾದಿ ವಸ್ತ್ರ ಧಾರಣೆ ಸೇವಾಕರ್ತರಿಗೆ ಅವಕಾಶ



ನೂತನ ಹಿಂದೂ ಸಂವತ್ಸರದ ಯುಗಾದಿ ಹಬ್ಬ ಮನೆ-ಮನೆಯಲ್ಲೂ ವಿಜೃಂಭಿಸುತ್ತದೆ. ಕಳೆದ 2 ವರ್ಷಗಳಲ್ಲಿ ಯುಗಾದಿ ಹಬ್ಬದ ಅಂಗವಾಗಿ ರಾಜ್ಯದಲ್ಲಿರುವ ಎಲ್ಲಾ ವಾಸವಿ ದೇವಾಲಯಗಳಿಗೆ ಒಂದೇ ತೆರನಾದ ವಸ್ತ್ರಗಳನ್ನು ನೀಡಿ ಯುಗಾದಿ ಹಬ್ಬದದಿನದಂದು ಸದರಿ ವಸ್ತ್ರವನ್ನು ಶ್ರೀಮಾತೆಗೆ ಸಮರ್ಪಣೆ ಮಾಡುವ ಮೂಲಕ **ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಂಘಟನಾ ಶಕ್ತಿ ಪ್ರದರ್ಶಿಸುವ ಮಹತ್ಕಾರ್ಯ ಯಶಸ್ವಿಯಾಗಿ ಮೂಡಿ ಬಂದಿದೆ**. ಈ ವರ್ಷವೂ ನಡೆಯಲಿರುವುದು ಯುಗಾದಿ ವಸ್ತ್ರವಿತರಣೆಗೆಆಸಕ್ತ ಸೇವಾ ಕರ್ತರು (ವ್ಯಕ್ತಿ/ಸಂಘ) ಕನಿಷ್ಠ ರೂ 5000/-ಗಳನ್ನು ನೀಡುವ ಮೂಲಕ ಶ್ರೀ ವಾಸವಿ ವಸ್ತ್ರ ಸಮರ್ಪಣೆಯ ಸೇವಾಕರ್ತರಾಗಲು ಉತ್ತಮ ಅವಕಾಶವಿದೆ. ತಾವು ನೀಡುವ ಸಣ್ಣ ಮೊತ್ತವೂ ಸಹ ರಾಜ್ಯದಲ್ಲಿರುವ 301 ಶ್ರೀ ವಾಸವಿ ಮಾತೆಯ ಸೇವೆಗೆ ಸಮರ್ಪಣೆಯಾಗುತ್ತದೆ. ವಸ್ತ್ರ ಸಮರ್ಪಣೆ ಸೇವೆಗೆ ಆಶಿಸುವವರು ಈ ಕೆಳಗಿನ ಬ್ಯಾಂಕ್ ಖಾತೆಗೆ ಕನಿಷ್ಠ ರೂ 5000/-ಗಳು ಹಾಗೂ ಮೇಲ್ಪಟ್ಟ ಹಣವನ್ನು ಪಾವತಿ ಮಾಡಿ, ಪಾವತಿ ಮಾಡಿರುವ **Acknowledgment No** ನ್ನು ಹಾಗೂ ಹೆಸರು, ವಿಳಾಸ, ಮತ್ತು ನಿಮ್ಮ ಮೊಬೈಲ್ ಸಂಖ್ಯೆಯನ್ನು ಮಹಾಸಭೆಯ ಮೊ 9663990439 ಸಂಖ್ಯೆಗೆ ಕಳುಹಿಸಿಕೊಟ್ಟಲ್ಲಿ ತಮಗೆ ರಸೀದಿ ಕಳುಹಿಸಿಕೊಡಲು ಅನುಕೂಲವಾಗುತ್ತದೆ.

**ವಂತಿಗೆಗಳನ್ನು ಕಳುಹಿಸಲು**

Account Holder Name : KARNATAKA ARYAVYSYA MAHASABHA Branch Name : GANDHINAGARA BRANCH
Bank Name : CENTRAL BANK OF INDIA ACCOUNT NUMBER : 1112824877 IFSC CODE : CBIN0280850


ACCOUNT NUMBER QR CODE

# ಶ್ರೀ ವಾಸವಿ ರಥಯಾತ್ರೆ – ಯಶಸ್ವಿ ಆರ್ಯವೈಶ್ಯ ಜಾತ್ರೆ




ಧ್ವಜಾರೋಹಣ ನಡೆಸಿದ ಮಹಾಸಭಾಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರ ಜೊತೆಗೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಕೆ ವಿ ರಾಮಪ್ರಸಾದ್ ಹಾಗೂ ಒಕ್ಕೂಟದ ಪದಾಧಿಕಾರಿಗಳು

**All Roads leads to vijayanaga** ಎನ್ನುವಂತೆ ಬೆಂಗಳೂರಿನ ಮೂಲೆ ಮೂಲೆಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಆರ್ಯವೈಶ್ಯ ಬಂಧುಗಳು ದಿನಾಂಕ 16–12–2025ರಂದು ಬೆಂಗಳೂರು ಆರ್ಯವೈಶ್ಯ ಒಕ್ಕೂಟದ ವತಿಯಂದ ವಿಜಯನಗರದ ಶ್ರೀ ವಾಸವಿ ದೇವಸ್ಥಾನದಲ್ಲಿ ಆಯೋಜಿಸಲಾದ **ಶ್ರೀ ವಾಸವಿ ರಥಯಾತ್ರೆ** ಯಲ್ಲಿ ಭಾಗವಹಿಸಲು ಅತ್ಯಂತ ಸಂಭ್ರಮದಿಂದ ಬೆಳಿಗ್ಗೆ 7.00 ಘಂಟೆಯಿಂದಲೇ ಆಗಮಿಸುತ್ತಿದ್ದರು. ಒಕ್ಕೂಟದ ಅಧ್ಯಕ್ಷರಾದ **ಶ್ರೀ ಬಿ ನಾಗಮಹೇಶ್, ಪ್ರಧಾನ ಕಾರ್ಯದರ್ಶಿ ಆರ್ ಶ್ರೀನಿವಾಸ, ಖಚಾಂಚಿ ಬದರೀನಾಥ್ ಹಾಗೂ ಛೇರ್ಮನ್ ಟಿ ಎ ಅಶೋಕ್ ಕುಮಾರ್** ಅವರ ಆದ್ವರ್ಯದಲ್ಲಿ ಈ ವಾಸವಿ ರಥವನ್ನು ಆಯೋಜಿಸಲಾಗಿ, ಎಲ್ಲರನ್ನೂ ಸ್ವಾಗತಿಸಲು ವಾಸವಿ ದೇವಸ್ಥಾನವನ್ನು ವಿಶೇಷ ಹೂವಿನ ತಳಿರುತೋರಣ, ವಾಸವಿ ಅಮ್ಮನವರನ್ನು ಗಿಳಿಯ ಮೇಲೆ ಕುಳಿತಿರುವ ಭಂಗಿಯಲ್ಲಿ ವಿಶೇಷವಾಗಿ ಹೂಗಳಿಂದ ಅಲಂಕಾರಿಸಲಾಗಿತ್ತು. ಭಕ್ತಗಣವು ವಾಸವಿ ಹಾಗೂ ಗಣ ದೇವರುಗಳ ದರ್ಶನ ಪಡೆದ ಮೇಲೆ ಪ್ರತಿಯೊಬ್ಬರಿಗೂ ಹಳದಿ ವಲ್ಲಿಯನ್ನು ಹೊದಿಸಿಲಾಯಿತು. ಪ್ರತಿಯೊಂದು ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಖಚಾಂಚಿಯವರಿಗೆ ಶಾಲು ಹೊದಿಸಿ, ಹಾರ ಹಾಕಿ ವಾಸವಿ ಮಾತೆಯ ಫೋಟೊ ನೀಡಿ ಗೌರವಿಸಲಾಯಿತು. ಬೆಂಗಳೂರಿನ ಹಲವಾರು ಬಡಾವಣೆಗಳಿಂದ 12 ಬಗೆ ಬಗೆಯ ರಥಗಳಲ್ಲಿ ವಿಶೇಷ ಅಲಕಾಂರದೊಂದಿಗೆ ವಾಸವಿ ಅಮ್ಮನವರು ಕಂಗೊಳಿಸುತ್ತಿದ್ದು, ಎಲ್ಲರೂ ಭಕ್ತಿ ಭಾವದಿಂದ ವೀಕ್ಷಿಸಿ ಪುನೀತ ಭಾವನೆ ತಳೆದರು, ಇದೊಂದು ದಾಖಲೆ ಎನ್ನುವಂತೆ 12 ಆಕರ್ಷಣೀಯ ರಥಗಳು, ಹತ್ತಕ್ಕೂ ಮೀರಿ ಆರ್ಯವೈಶ್ಯ ಮಹಿಳೆಯರ ಆಟೋಗಳು, 70ಕ್ಕೂ ಮೀರಿದ ಪುರಷರು ಮತ್ತು ಸ್ತ್ರೀಯರಿಂದ ಬುಲೆಟ್ ವಾಹನ ಚಾಲನೆ, ಹುಲಿವೇಷ, ಕಂಸಾಳೆ, ಡೋಲು, ದೇವರ ಪಟ ಮುಂತಾದ ಹತ್ತಕ್ಕೂ ಮೀರಿದ ಕಲಾತಂಡಗಳು, ಮಹಿಳೆಯರ ಕೋಲಾಟ, ನೃತ್ಯ, ಭಜನೆ, ಜೈಕಾರ ಘೋಷಣೆಗಳು ರಥಯಾತ್ರೆಯ ವೈಶಿಷ್ಟ್ಯಗಳಾಗಿದ್ದವು. ಕಚ್ಚೆ ಸೀರೆಯೊಂದಿಗೆ ತಲೆಯ ಮೇಲೆ ವಿಶೇಷ ಪೇಟಾ ಧರಿಸಿ, ಬುಲೆಟ್ ಚಲಾಯಿಸುತ್ತಿದ್ದ ಮಹಿಳೆಯರು ಯಾವುದೇ ವೀರ ವನಿತೆಯರಿಗೆ ಕಡಿಮೆ ಇಲ್ಲದಂತೆ ಕಂಗೊಳಿಸುತ್ತಿದ್ದು, ಎಲ್ಲರೂ ಬಾಯಿಯ ಮೇಲೆ ಬೆರಳಿಟ್ಟುಕೊಂಡು ಬೆರಗಾಗಿ, ಅವರೊಂದಿಗೆ ಭಾವಚಿತ್ರ ತೆಗೆಸಿಕೊಂಡಿದ್ದೂ ಉಂಟು. **ಕರ್ನಾಟಕ ಸರ್ಕಾರದ ತೋಟಗಾರಿಕೆಯ ನಿರ್ದೇಶಕರಾದ ಆರ್ ಗಿರೀಶ್, ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್ ಮತ್ತು ಬಿಬಿಎಂಪಿ ಮಾಜಿ ಸದಸ್ಯರಾದ ಹೆಚ್ ರವೀಂದ್ರ ಹಾಗೂ ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಕೆ ವಿ ರಾಂಪ್ರಸಾದ್**ರವರುಗಳು ವಾಸವಿ ಮಾತೆಗೆ ಪುಷ್ಪಾರ್ಚನೆ ಮಾಡಿ ರಥ ಯಾತ್ರೆಯ ಚಾಲನೆಗೆ ಅನುವು ಮಾಡಿಕೊಟ್ಟರು, ಹಿರಿಯ ಹಾಗೂ ಪ್ರಮುಖ ದಾನಿಗಳು ವಾಸವಿದಂಡ ಹಿಡಿದು ಪುಷ್ಪ ಸಲ್ಲಿಸಿದರು. ವಿಜಯನಗರದ ರಾಜ ಬೀದಿಗಳಲ್ಲಿ ಹೊರಟ ರಥಯಾತ್ರೆಯನ್ನು ವೀಕ್ಷಿಸಲು ದಾರಿಯುದ್ದಕ್ಕೂ ಸಮುದಾಯದ ಬಾಂಧವರು ಸಹಸ್ರಾರು ಸಂಖ್ಯೆಯಲ್ಲಿ ಪರ ಊರು, ರಾಜ್ಯಗಳಿಂದ ಆಗಮಿಸಿ ಭಕ್ತಿ ಭಾವದಿಂದ ಪುಷ್ಪಗಳನ್ನು ಅರ್ಚನೆ ಮಾಡಿ ಧನ್ಯತಾ ಭಾವವನ್ನು ಹೊಂದಿದರು. ರಥಯಾತ್ರೆಯು ಎರಡು ಕಿ.ಮೀ ಸವೆಸಿ **ಹಂಪಿನಗರದ ಚಂದ್ರಶೇಖರ ಆಜಾತ್ ಕ್ರಿಡಾಂಗಣ** ತಲುಪಿದಾಗ, ಮಹಿಳೆಯರು ಆರತಿಗಳೊಂದಿಗೆ ಬರಮಾಡಿಕೊಂಡು ವೇದಿಕೆಯ ಎಡ,ಬಲ ಭಾಗಗಳಲ್ಲಿ ನಿಲ್ಲಿಸಲಾಯಿತು, ಯಕ್ಷಗಾನ, ಗಾಯನ ನಡೆದು ಎಲ್ಲರ ಮನಗೆದ್ದರು. ಗಣ್ಯರನ್ನು ಬಹುಬಲಿ ರಥದಲ್ಲಿ ಕರೆತಂದ ವ್ಯಭವದ ದೃಶ್ಯ ಎಲ್ಲರ ಮನಸೆಳೆಯಿತು. ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರು ಸಮಾರಂಭದ ಉದ್ಘಾಟನೆ ನೆರವೇರಿಸಿ, ವಾಸವಿ ರಥಯಾತ್ರೆಯು ಆರ್ಯವೈಶ್ಯರ ಜಾತ್ರೆಯಾಗಿದ್ದು, ಸಂಘನೆಗೆ ಒತ್ತು ನೀಡುತ್ತಿದ್ದು, **ಗ್ಲೋಬಲ್ ಆರ್ಯವೈಶ್ಯ ಸಮಿಟ್** ಕುರಿತು ತಿಳಿಸಿದರು, ಸ್ಥಳೀಯ ಶಾಸಕರಾದ ಶ್ರೀ ಎಂ ಕೃಷ್ಣಪ್ಪನವರು ಆರ್ಯವೈಶ್ಯರ ದಾನಧರ್ಮ ಕಾರ್ಯಗಳನ್ನು ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.ಶ್ರೀ ಕೆ ವಿ ರಾಂಪ್ರಸಾದ್‌ರವರು ಒಕ್ಕೂಟದ ಅಭೂತಪೂರ್ವ ಸಂಘಟನಾ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ವಾಸವಿ ಮಾತೆಗೆ ಆರತಿ ಗೀತೆಗೆ ಎಲ್ಲರೂ ದೀಪ ಬೆಳಗಿದ ದೃಶ್ಯ ಮಹಮೋಹಕವಾಗಿತ್ತು, ಹಿರಿಯ ದಾನಿಗಳಿಗೆ ಸ್ಮರಣಿಕೆ ನೀಡಿ ಗೌವರವಿಸಿ ಸನ್ಮಾನಿಸಲಾಯಿತು. ಒಕ್ಕೂಟದ ಕಾರ್ಯದರ್ಶಿ ಶ್ರೀ ಟಿ ಎನ್ ಅಶೋಕ್ ಹಾಗೂ ಸಾವಿತ್ರಿರವರ ನಿರೂಪಣೆಯೊಂದಿಗೆ ವೇದಿಕೆ ಕಾರ್ಯಕ್ರಮ ಯಶಸ್ವಿಯಾಯಿತು. ಪ್ರೀತಿಯ ಭೋಜನದ ನಂತರ **ಸುಮಾರು 50ಕ್ಕೂ ಹೆಚ್ಚು ಹತ್ತು ವರ್ಷದೊಳಗಿನ ಅವಳಿ–ಜವಳಿ ಮಕ್ಕಳು ಸಮವಸ್ತ್ರದಲ್ಲಿ** ವೇದಿಕೆಯ ಮೇಲೆ ಬಂದಾಗ ಸಭಿಕರು ರೋಮಾಂಚಿತರಾಗಿ ಚಪ್ಪಾಳೆ, ಶಿಳ್ಳೆ ಹೊಡೆದರು. **19 ಹಾಗೂ 15 ಜನರುಗಳಿದ್ದ ಕೂಡುಕುಟುಂಬದ ಮೂರು ಕುಟುಂಬ**ಗಳನ್ನು ಸಭೆಗೆ ಪರಿಚಯಿಸಿ, ಗೌರವಿಸುಂತಹ ಆದರ್ಶಪೂರ್ಣ ಕಾಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, **ಅತ್ತೆ–ಸೊಸೆ, ಅಮ್ಮ– ಮಕ್ಕಳುಗಳ ವೇದಿಕೆ ನಡಿಗೆ** ಆಕರ್ಷಣೀಯವಾಗಿತ್ತು. ಒಟಾರೆ ಇಡೀ ದಿನದ ರಥಯಾತ್ರೆ ಹಾಗೂ ವೇದಿಕೆಯ ಆಕರ್ಷಣೀಯ ಕಾರ್ಯಕ್ರಮಗಳು ಅರ್ಥಪೂರ್ಣವಾಗಿದ್ದು, ಸಂಘಟನೆಗೆ ಒತ್ತು ನೀಡಿ, ಸಂಭ್ರಮದ ಆರ್ಯವೈಶ್ಯ ಜಾತ್ರೆಯಯಾಗಿ ದಾಖಲೆಯಾಯಿತು.



ರಥಯಾತ್ರೆಯಲ್ಲಿ ಭಾಗವಹಿಸಿದ್ದ ಜನ ಸಮೂಹ




ರಥಯಾತ್ರೆ ಕಾರ್ಯಕ್ರಮದ ವೇದಿಕೆಯಲ್ಲಿ ಭಾಗವಹಿಸಿದ್ದ ಗಣ್ಯರು

**ವರದಿ ಅಶೋಕ್ ಟಿ ಎನ್ ಕಾರ್ಯದರ್ಶಿ, ಒಕ್ಕೂಟ**

## ಮಹಾಸಭಾ ಕ್ಯಾಲೆಂಡರ್ ಬಿಡುಗಡೆ



ಶ್ರೀ ಕೆವಿ ರಾಮಪ್ರಸಾದ್ ಅಧ್ಯಕ್ಷರು ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ನಿಗಮ ರವರಿಂದ ಕ್ಯಾಲೆಂಡರ್ ಲೋಕಾರ್ಪಣೆ

ಮಹಾಸಭೆಯ ಯೋಜನೆಗಳ ಮಾಹಿತಿಯನ್ನು ಹೊಂದಿರುವ 2026ನೇ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರು ವಿಭಾಗದ ಕಾರ್ಯಕರ್ತರು ಸಿದ್ಧಪಡಿಸಿ ದಿನಾಂಕ 9–1–2026ರ ಶುಕ್ರವಾರ ಮೈಸೂರು ನಗರದಲ್ಲಿರುವ ವಾಸವಿ ಭವನದ ಸಭಾಂಗಣದಲ್ಲಿ ಆರ್ಯವೈಶ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಕೆ ವಿ ರಾಂಪ್ರಸಾದ್‌ರವರಿಂದ ಲೋಕಾರ್ಪಣೆ ಮಾಡಿಸಿದರು. ಮೈಸೂರು ವಿಭಾಗಕ್ಕೆ ಬರುವ ಪ್ರತಿಯೊಂದು ಆರ್ಯವೈಶ್ಯ ಮನೆಗಳಲ್ಲಿಯೂ ಈ ಕ್ಯಾಲೆಂಡರ್‌ನ ಸದುಪಯೋಗ ಆಗಬೇಕೆಂಬ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. ಆಸಕ್ತರು ವಿಭಾಗದ ಕಾರ್ಯಕರ್ತರನ್ನು ಸಂಪರ್ಕಿಸಲು ಕೋರಲಾಗಿದೆ.

**ಕೆ ಜಿ ಪಾರ್ಥಸಾರಥಿ**
ಉಪಾಧ್ಯಕ್ಷರು ಮೈಸೂರು ವಿಭಾಗ
9591826661

**ಇ ಕೆ ಅನಂತ್**
ಕಾರ್ಯದರ್ಶಿಗಳು ಮೈಸೂರು ವಿಭಾಗ
9886343896

# ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕ್ ಲಿ.,

GROW TOGETHER

ನಂ.6, ಆಸ್ಪತ್ರೆ ರಸ್ತೆ, ಬೆಂಗಳೂರು-560053, ದೂ:ಸಂಖ್ಯೆ 080- 22253389

ಶಾಖೆ: ನಂ. 138, 14ನೇ ಮುಖ್ಯರಸ್ತೆ, ಕುಮಾರಸ್ವಾಮಿ ಲೇಔಟ್, ಬೆಂಗಳೂರು-560111, 080-26661253

E-mail:info@mscmbank.in www.vasavimscmbank.in

## 3ನೇ ಶಾಖೆ ಪ್ರಾರಂಭೋತ್ಸವ

**ದಿನಾಂಕ: 6-2-2026, ಶುಕ್ರವಾರ ಬೆಳಿಗ್ಗೆ 10.00 ಘಂಟೆಗೆ**

ವಿಳಾಸ #438, ಸಾಯಿ ಲಕ್ಷ್ಮಿ, ಹಳೆಯ ಅಂಚೆ ಕಚೇರಿ ರಸ್ತೆ,
ಕೆ. ಆರ್. ಪುರಂ, ಬೆಂಗಳೂರು --560036.

SCAN FOR LOCATION

ನಿಮ್ಮ ಠೇವಣಿಗಳ ಮೇಲೆ ಗರಿಷ್ಠ **8.5 %** ಗಳಿಸಿ

### ಸೌಲಭ್ಯಗಳು

- BUSINESS LOAN
- CONSUMER LOAN
- HOME INTERIORS/RENOVATION LOAN
- ALL PURPOSE LOAN AGAINST GOLD
- INSTANT SANCTION/INSTANT RELEASE
- Housing Loan 8.5%
- CAR LOAN
- ಮಹಿಳೆಯರಿಗಾಗಿ ವಿಶೇಷ ಕೊಡುಗೆ ವನಿತಾ ವಿಕಾಸ ಯೋಜನೆ

### ಆಡಳಿತ ಮಂಡಳಿ ವರ್ಗ

ಅಧ್ಯಕ್ಷರು
ಶ್ರೀ ಆರ್ ಪಿ ರವಿಶಂಕರ್

ಉಪಾಧ್ಯಕ್ಷರು
ಶ್ರೀ ವೈ ಎ ಹರಿಕಿಶೋರ್

**ನಿರ್ದೇಶಕರು**

ಶ್ರೀ ವೈ ಎ ಪ್ರಸಾದ್
ಶ್ರೀ ಎನ್ ಆರ್ ಸುರೇಂದ್ರನಾಥ್
ಶ್ರೀ ಎನ್ ಜಿ ಶ್ರೀನಿವಾಸ
ಶ್ರೀ ಬಿ ಎಸ್ ಆದಿತ್ಯ
ಶ್ರೀ ಮಂಜೇಶ್ ಎನ್
ಶ್ರೀ ರಾಮಕೃಷ್ಣ ಜೆ
ಶ್ರೀಮತಿ ಉಮಾ ಸಾಯಿರಾಂ

**ವೃತ್ತಿಪರ ನಿರ್ದೇಶಕರು**

ಶ್ರೀ ಎ ವೆಂಕಟೇಶಯ್ಯ ಶೆಟ್ಟಿ ಶ್ರೀ ವಿನಯ್ ತ್ಯಾಗರಾಜ್

## ಸರ್ವರಿಗೂ ಆದರದ ಸ್ವಾಗತ

*T&C applies



# ಬೆಂಗಳೂರು ಆರ್ಯವೈಶ್ಯ ಮಂಡಳಿಗಳ ಒಕ್ಕೂಟ(ರಿ)

ನಂ 16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು-560009



## 253 ದಂಪತಿಗಳಿಂದ ಶ್ರೀರಂಗಪಟ್ಟಣದ ಕಾವೇರಿ ತೀರದಲ್ಲಿ

ಶ್ರೀ ಮಹಾ ಸುದರ್ಶನ ಹೋಮ, ಶ್ರೀ ರಾಜ್ಯಲಕ್ಷ್ಮೀ ನರಸಿಂಹ ಸ್ವಾಮಿ ಹೋಮ, ಹಾಗೂ
ಶ್ರೀ ರಮಾಸತ್ಯನಾರಾಯಣ ಸ್ವಾಮಿ ಪೂಜಾ ಮಹೋತ್ಸವ.

| ದಿನಾಂಕ : 8-2-2026ರ ಭಾನುವಾರ | ಪೂಜಾ ಶುಲ್ಕ -ರೂ.7,501/- |
|---|---|

(ಪೂಜಾ ಸಾಮಗ್ರಿಗಳು ಮತ್ತು ಪ್ರಯಾಣದ ವೆಚ್ಚ ಹಾಗೂ ಸೇವಾಕರ್ತ ದಂಪತಿಗಳಿಗೆ ಮಡಿ ವಸ್ತ್ರಗಳು ಸೇರಿ)

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

| ಆರ್ ಶ್ರೀನಿವಾಸ | ಟಿ ಎ ಬದರಿನಾಥ್ | ಟಿ ಎನ್ ಅಶೋಕ್ | ಸಿ ವಿ ಅಶೋಕ್ ಕುಮಾರ್ |
|---|---|---|---|
| 9886082356 | 9448460986 | 9449653053 | 9448049410 |

**ಒಕ್ಕೂಟದ ಬ್ಯಾಂಕ್ ವಿವರ/**

BANGALORE ARYAVYSYA MANDALIGALA OKKUTA BANK: CANARA BANK, CHAMARAJPET, BANGALURU
A/C NO: 04041010006140(CURRENT ACCOUNT) IFSC Code: CNRB0010404


ಮುದ್ರಕರು: ಗಿರೀಶ್ ಪ್ರಿಂಟರ್ಸ್, ನಂ.161/2, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು - 560 020 ಇ-ಮೇಲ್ : info@gireeshprinters.com website : www.gireeshprinters.com
ಸಂಪಾದಕರು ಮತ್ತು ಪ್ರಕಾಶಕರು: ರಾ ಪ ರವಿಶಂಕರ್ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು-09 ಫೋನ್: 22206151/22206152